Reg No B G 155 1-2-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಆರಮನೆ ಸಿರಪ್ಪೆ ದಾರ್ ಎಂ. ಸುಬ್ಬಣ್ಣ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪೂರ್ವ ಪಾಕ'ನಲ್ಲಿ ಗೋಳೀಬಾರ್ : 1000 ಕ್ಕೂ ಹೆಚ್ಚು ಬಂಧನ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ಸಿದ್ಧಪೇರಿಸಲಾಗುವುದು

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ನಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ. ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನಳ್ಳಸಿಂಹಯ್ಯಂಗಾರ್ (ಜೊಂಗಸ್ಕೋದು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವೆಡೆಂದು ಆಶಿಸಿ, ಕೃತಜ್ಞತಾಪೂರ್ವಮಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಜಮ್ಮುವಿಗೆ ರೈಲು

ಜಮ್ಮು — ಕೆಲವು ಹಾದಿಂದ ಜಮ್ಮುವಿಗೆ ಕನಿಷ್ಠ 7 ದೊಡ್ಡ ಮತ್ತು 208 ಚಿಕ್ಕ ರೈಲ್ವೆ ಸೇತುವೆಗಳು ನಿರ್ಮಿಸಲಾಗುವುದೆಂದೂ ರೈಲು ಮಾರ್ಗವು 1972 ರಲ್ಲಿ ಮುಗಿಯುವುದೆಂದೂ ವರದಿಯಾಗಿದೆ.

ಕೂಲಿಗಳಲ್ಲಿ ಘರ್ಷಣೆ

ಹೈದರಾಬಾದು — ಕರೀಂನಗರ ಜಿಲ್ಲೆಯ ಕಲ್ಲಿದ್ದಲು ಗಣಿ ಭಾಗದಲ್ಲಿ ಆಂಧ್ರ-ತೆಲುಂಗಾಣ ಕೂಲಿಗಳಲ್ಲಿ ಘರ್ಷಣೆಯಾಗಿ ಗುಂಡುಹಾರಿಸಲಾಯಿತು : 5 ಮಂದಿ ಗಾಯಗೊಂಡರು — ಗೆಲ್ಲಿಕೀಬಾರು ಮಾಡಿದವರು ಅಲ್ಲಿದ್ದ ಪೋಲೀಸರೋ ಸೈನಿಕರೋ ಗೊತ್ತಾಗಿಲ್ಲ.

ಆಂಧ್ರ ಪ್ರದೇಶದಲ್ಲಿ

ಹೈದರಾಬಾದು — ಅನೇಕ ತಕ್ಸೀರುಗಳಿಗೂ ಮತ್ತು ಪ್ರತಿಬಂಧಕ ಮಾರ್ಗನಾಗಿಯೂ 300 ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದೆಯೆಂದು ಪೋಲೀಸು ಇನ್ಸ್ಪೆಕ್ಟರ್ ಜನರಲ್‌ರು ಹೇಳಿದರು.

ಖಡ್ಡಾಯ ಮಿಲಿಟರಿ ಸೇವೆ

ವಾಷಿಂಗ್ಟನ್ — ಖಡ್ಡಾಯ ಮಿಲಿಟರಿ ಸೇವೆಯನ್ನು ರದ್ದುಪಡಿಸುವ ಬಗ್ಗೆ ಕಾರ್ಯ ಕೈಗೊಳ್ಳಲು ರಕ್ಷಣಾ ಇಲಾಖೆಗೆ ಅಧ್ಯಕ್ಷ ನಿಕ್ಸನ್ನರು ತಿಳಿಸಿರುವರು.

ಲಾಟರಿಗೆ ವಿರೋಧ

ಬೆಂಗಳೂರು — ಅಭಿವೃದ್ಧಿ ಕಾರ್ಯಗಳಿಗೆ ಲಾಟರಿ ಮೂಲಕ ಹಣ ಎತ್ತುವ ಧನ್ನು ಪುರಸಮಿತಿ ತೀವ್ರ ವಿರೋಧಿಸಿದೆ — ಸಮಿತಿಯು ಪ್ರಧಾನಿ, ಉಪಪ್ರಧಾನಿ, ಕಾಂಗ್ರೆಸ್ ಅಧ್ಯಕ್ಷರಿಗೆ ತಂತಿ ಕಳುಹಿಸಿ ರಾಜ್ಯ ಸರಕಾರವು ಲಾಟರಿ ಜಾರಿಗೆ ತರದಂತೆ ತಿಳುನಳಿಕೆ ಕೊಡಲು ವಿನಂತಿಸಿದೆ — ತಂದರೆ ಅದರ ವಿರುದ್ಧ ತೀವ್ರ ಹೋರಾಡುವುದಾಗಿ ಸಮಿತಿ ಅಧ್ಯಕ್ಷ ಶ್ರೀ ನಾಗಣ್ಣನವರು ಹೇಳಿರುವರು.

ಮಹಾರ್ಜ ವರದಿ

ಬೆಂಗಳೂರು — ಮೈಸೂರು-ಮಹಾರಾಷ್ಟ್ರ ಗಡಿ ಸಮಸ್ಯೆ ಬಗ್ಗೆ ಮಹಾರ್ಜ ಕಮಿಷನ್ ವರದಿಯನ್ನು ಜಾರಿಗೆ ತರಲು ತುರ್ತು ಕಾರ್ಯಕ್ರಮ ಕೈಗೊಳ್ಳಬೇಕೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಪ್ರಧಾನಿಗಳಿಗೆ ಒತ್ತಾಯಮಾಡಿ ಕಾಗದ ಬರೆದಿರುವರು — ವಿದ್ಯಾರ್ಥಿಗಳು ಗಡಿ ಸಮಸ್ಯೆಯಿಂದ ದೂರವಿರಬೇಕೆಂದು ಮುಖ್ಯಮಂತ್ರಿಗಳವರು ಸಂದೇಶವಿತ್ತು ಒತ್ತಾಯ ಮಾಡಿರುವರು.

ಧೈರ್ಯ ಸಾಹಸ

ಕಲ್ಕತ್ತಾ — ಒಬ್ಬ ಭಾರತ ನೌಕಾಧಿಕಾರಿ ಮತ್ತು ಒಬ್ಬ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಒಂದು ದೋಣಿಯಲ್ಲಿ ಕುಳಿತು ಯಾವ ಕಾವಲೂ ಇಲ್ಲದೆ, ಭೀಕರ ಬಂಗಾಳಾ ಕೊಲ್ಲಿಯ ಮೂಲಕ ಆಂಡಮಾನಿಗೆ ಹೋಗಲಿದ್ದಾರೆ.

ಪುರಸಭೆ

ಮೈಸೂರು — ನಿನ್ನೆ ಪುರಸಭಾಧಿವೇಶನವು ಪುರಸಭಾಧ್ಯಕ್ಷ ಶ್ರೀ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ರಸ್ತೆಗಳು ಕೆಟ್ಟಿರುವ ಮತ್ತು ಸರಿಪಡಿಸಬೇಕಾದ ವಿಷಯ ಸದಸ್ಯರು ತಿಳಿಸಿದರು.

ಅಣ್ಣಾ ದೊರೈ

ಮದರಾಸು — ಮುಖ್ಯಮಂತ್ರಿ ಅಣ್ಣಾ ದೊರೈರ ಸ್ಥಿತಿ ಅಷ್ಟು ಉತ್ತಮಗೊಂಡಿಲ್ಲ ದಿದ್ದರೂ ಆಶಾಜನಕವಾಗಿದೆ — ಔಷಧಗಳನ್ನು ಹಾಂಕಾಂಗ್, ವೆಲ್ಲೂರು, ಬೆಂಗಳೂರುಗಳಿಂದ ತರಿಸಲಾಗುತ್ತಿದೆ.

ಪಾಕಿಸ್ಥಾನದ ರಾಜಕೀಯ ಆಂದೋಳನ

ಕರಾಚಿ — ಪೂರ್ವ ಪಾಕಿಸ್ಥಾನದಲ್ಲಿ ಅಯೂಬರ ವಿರುದ್ಧ ಪ್ರದರ್ಶನ ಹೆಚ್ಚಿದೆ; ಗುರುವಾರ ಫರೀದ್‌ಪುರ, ನ್ಯಾದರ್‌ಪುರ, ಮೊಹ್ಯಾಮೆ, ಜಾಂಬೊರಿದಲ್ಲಿ ಗೋಳೀಬಾರು ಮಾಡಲಾಯಿತು ; ಇಬ್ಬರು ಸತ್ತು ನಾಲ್ವರು ಗಾಯಗೊಂಡರು — ಪೋಲೀಸರು ವಿರುದ್ಧ ನಾಯಕ 82 ವರ್ಷದ ಮೌಲಾನಾ ಅಬ್ದುಲ್ ಹಮೀದ್ ಭಾಷಾಣಿ ಸೇರಿ ಸಾವಿರಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿದ್ದಾರೆ — ಪಶ್ಚಿಮ ಪಾಕಿಸ್ಥಾನದಲ್ಲಿ — ಲಾಹೋರಿನಲ್ಲಿ ನಡೆಯುತ್ತಿರುವ ಪಾರ್ಲಿಮೆಂಟ್ ಅಧಿವೇಶನವನ್ನು ಪತ್ರಿಕೆಯವರು ಬಹಿಷ್ಕರಿಸಿರುವದರಿಂದ ಸರ್ಕಾರದ ಮೂಲಕ ವರದಿ ಮಾಡಲು ಪ್ರಯತ್ನಿಸಲಾಗುತ್ತಿದೆ — ಪ್ರತಿಬಂಧಕಾಜ್ಞೆ ವಿರೋಧಿಸಿ ರಾವಲ್ಪಿಂಡಿಯಲ್ಲಿ ವಿದ್ಯಾರ್ಥಿಗಳು ಪ್ರದರ್ಶನದ, ಮತ್ತು ಲಾಹೋರಿಗೆ ವಿರೋಧಿಗಳ ಸಾಮೂಹಿಕ ಮೆರವಣಿಗೆ ಏರ್ಪಾಡಿದೆ — ವಿರೋಧಿಗಳ ಸಂಯುಕ್ತ ನಾಯಕ ಮುರುಲ್ ಅಮೀನರು ಪಾಕಿಸ್ಥಾನ ರಾಷ್ಟ್ರೀಯ ಮಹಾಸಭೆಯಲ್ಲಿ ಅಯೂಬರ ಸರ್ವಾಧಿಕಾರವನ್ನು ನಿಂದಿಸಿದರು — ಹಿಂಸಾ ಚಳವಳವು ಅಯೂಬರ ಆಪಳಿತವನ್ನು ಉರುಳಿಸಲಾರದೆಂದು ವಿದೇಶಾಂಗ ಮಂತ್ರಿಯವರು ಹೇಳಿದರು.

ಸರಕಾರದ ನೆರವು

ಮೈಸೂರು — ದೇಶದಲ್ಲಿನ ರೈತರಿಗೆ ಆವಶ್ಯಕವಾಗಿ ರೂ. 1200 ಕೋಟಿಯಲ್ಲಿ ಸರಕಾರ ಈ ವರ್ಷ ರೂ. 560 ಕೊಡುವದೆಂದೂ, ಇದನ್ನು ಹೆಚ್ಚು ಬೆಳೆ ಬೆಳೆಯಲು ಉಪಯೋಗಿಸಬೇಕೆಂದೂ ಕೇಂದ್ರದ ಸ್ಟೀಮಂತ್ರಿ ಶ್ರೀ ಗುರುಪಾದಸ್ವಾಮಿಯವರು ಹೇಳಿದರು.

ಪುನಃ ಜೀವ ತರಬಹುದು

ಫ್ಲಾರೆನ್ಸ್— ಈಗಿನ ಪರಿಸ್ಥಿತಿಯಲ್ಲಿ ಸತ್ತನೆಂದು ಭಾವಿಸಲ್ಪಟ್ಟವರಿಗೆ ಪುನಃ ಜೀವ ತರಬಹುದೆಂದು ರಷ್ಯಾ ನಿಪುಣರೊಬ್ಬರು ಹೇಳಿದ್ದಾರೆ. ಏಕದಂ ಸತ್ತವರಲ್ಲಿ ಮೆದಳಿನ ಕಾರ್ಯವೂ ನಿಲ್ಲುವನಂತೆಗೆ ಜೀವವು ಹೋಗಿರುವುದಿಲ್ಲವೆಂದು ಹೇಳಿರುವರು. ರಕ್ತ ಚಲನೆ, ಉಚ್ವಾಸನಿಶ್ವಾಸ ನಿಂತು ಜೀವ ಮುಕ್ತಾಯಗೊಂಡಿತೆಂದು ನಾವು ತಿಳಿದರೂ, ಆ ಕೂಡಲೇ ಎಲ್ಲ ಅಂಗಾಂಗಗಳೂ, ನಾಡಿಕೂಟಗಳೂ ಸತ್ತಿರುವುದಿಲ್ಲವೆಂಬುದನ್ನು ನಾವು ಬಲ್ಲೆವು, ಎಂದಿರುವರು.

ನಾಯಿಗಳು ಸಸ್ಯಾಹಾರಿಗಳಂತೆ

ರಷ್ಯಾದ ಪ್ರಥಮ ಬಹಿರಾಕಾಶಯಾತ್ರಿಗಳಾದ ಎರಡು ನಾಯಿಗಳು, ತಮ್ಮ ಪ್ರಯಾಣಾನಂತರ ಮಾಂಸಕ್ಕಿಂತ ಸಸ್ಯಾಹಾರವನ್ನೇ ಇಚ್ಛಿಸಿದ್ದವೆಂದು ಪ್ರಕಟವಾಗಿದೆ – ಹೈಂಚ್ ಹಿಮಾಲಯಾ ದಂಡಯಾತ್ರೆಯವರು, ಬಹಳ ಎತ್ತರದಲ್ಲಿ ಲೈಂಗಿಕ ಯೋಚನೆಯೇ ಇರುವುದಿಲ್ಲವೆಂದಿರುವರು – ಅಂದರೆ ಬಹಳ ಎತ್ತರದಲ್ಲಿರುವದರಿಂದ ಮಾನವನು ಶ್ರೇಷ್ಠನಾಗುವನೆಂಬುದು ವ್ಯಕ್ತವಾಗುವುದು – ಇದಕ್ಕಾಗಿಯೇ ಭಾರತದ ಋಷಿಗಳು ತಪಸ್ಸಿಗೆ ಹಿಮಾಲಯಕ್ಕೆ ತೆರಳುತ್ತಿದ್ದರು.

ಸೀತಾದೇವಿಯಂತಿರಬೇಡಿ— ಪ್ರಧಾನಿ ಇಂದಿರಾರ ಬುದ್ಧಿವಾದ

ಸನ್ಮಾರ್ಗದಲ್ಲಿ ಪ್ರಕಟವಾದ ವಾರ್ತೆ ಇದು.

ವಿಜಾರತ್ತಿನಲ್ಲಿನ ಒಂದು ಚುನಾವಣಾ ಸಭೆಯಲ್ಲಿ ಇಂದಿರಾ ಗಾಂಧಿಯವರು ಈ ಕಾಲದಲ್ಲಿ ಮಹಿಳೆಯರು ಸೀತಾದೇವಿಯಂತೆ ತಮ್ಮ ಪತಿಯೊಡನೆ ಕಾಡಿಗೆ ಹೋಗಬಾರದೆಂದು ಹೇಳಿದರು. ಸೀತಾದೇವಿಯ ಸತೀತ್ವವನ್ನು ಇವರು ಪೆಚ್ಚಲಾಗದವರಾಗಿರಬಹುದು ; ಆದರೂ ಯಾರು ತುಂಬಾ ಭಕ್ತಿಯಿಂದ ಯಾರ ಹೆಸರಿನ ಬಗ್ಗೆ ಮಾತನಾಡಲೂ ಉಚ್ಚರಿಸಲೂ ಯೋಗ್ಯರಲ್ಲವೋ ಅಂತಹವರು ಬಗ್ಗೆ ಮಾತನಾಡದಿರಬೇಕು. ಎಷ್ಟು ನಾಚಿಕೆಗೇಡು ! (ಟ್ರೂತ್)

Help The Gorakshana

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳೂ ಸನ್ನಿಧಿಯಲ್ಲಿ ದೊರೆಯುತ್ತವೆ

Quality Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಜಯಪ್ರದ 3ನೇ ವಾರ

.... ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಆ ಮೈ ನಾ ಮೈ

ತಾರಾಗಣ— ಶರ್ಮಿಳಾ ಟಾಗೋರ್, ಪ್ರೇಂ ಭೋಸ್ರ ರಾಜೇಂದ್ರನಾಥ್, ಮದನಪುರಿ — ಸಂಗೀತ : ಕಲ್ಯಾಣ್‌ಜೀ ಆನಂದ್‌ಜೀ

[ದಿನ 3 ಪ್ರದರ್ಶನಗಳು]

ಅಪೆರಾ ಜನಪ್ರಿಯ 2ನೇ ವಾರ

— ಅತ್ಯಮೋಘ ತಮಿಳು ಚಿತ್ರ —

ಒಳವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah. Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 1.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4